ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.**

ದಿನಾಂಕ:06ನೇ ಮೇ 2014

ಸಂಖ್ಯೆ:ವೃ.ಶಿ.ವಿಭಾಗ:ಮರ:ಶಾ.ವ.ಕಾ:01:2014-15

**: ಸು ತ್ತೋ ಲೆ :**

**ವಿಷಯ:** "ಮಗುವಿಗೊಂದು ಮರ, ಶಾಲೆಗೊಂದು ವನ" ಕಾರ್ಯಕ್ರಮದ ಅನುಷ್ಠಾನದ ಬಗ್ಗೆ.

**ಉಲ್ಲೇಖ:** ದಿ:09.10.2013ರಂದು ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭಾ ನಡಾವಳಿಯ ಸಂ: ವೃ.ಶಿ.ವಿಭಾಗ:ವಿ.ಪ.ಸಭೆ:01:2013-14, ದಿನಾಂಕ:25.10.2013.

* * * * *

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರಿನ ಶ್ರೀ ಸಿದ್ಧಗಂಗಾ ಮಠದಲ್ಲಿ ದಿನಾಂಕ:09.07.2011 ರಂದು ವಿದ್ಯುಕ್ತವಾಗಿ ಉದ್ಘಾಟನೆಯಾದ "ಮಗುವಿಗೊಂದು ಮರ, ಶಾಲೆಗೊಂದು ವನ" ಕಾರ್ಯಕ್ರಮದ ಮುಂದುವರಿಕೆಗಾಗಿ ಉಲ್ಲೇಖದನ್ವಯ ರಾಜ್ಯದ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ದಿನಾಂಕ:05.06.2014ರಂದು ವಿಶ್ವಪರಿಸರ ದಿನಾಚರಣೆ ಆಚರಿಸುವುದರೊಂದಿಗೆ ಅದರ ಮಹತ್ವ ಹಾಗೂ ಉಪಯುಕ್ತತೆಯ ಬಗ್ಗೆ ವಿದ್ಯಾರ್ಥಿಗಳಿಗೆ ತಿಳುವಳಿಕೆ ಮೂಡಿಸುವುದು. ಶಾಲೆಗಳಲ್ಲಿ ಲಭ್ಯವಿರುವ ಭೂಮಿಯಲ್ಲಿ [ಕ್ರೀಡಾ ಮೈದಾನ ಹೊರತುಪಡಿಸಿ] "ಮಗುವಿಗೊಂದು ಮರ ಶಾಲೆಗೊಂದು ವನ" ಕಾರ್ಯಕ್ರಮದ ಅಡಿಯಲ್ಲಿ ಪ್ರತಿ ವಿದ್ಯಾರ್ಥಿಯಿಂದ ಒಂದು ಗಿಡ ಅಥವಾ ಪ್ರತಿ ವಿದ್ಯಾರ್ಥಿ ತಂಡದಿಂದ ಒಂದು ಗಿಡ ನೆಟ್ಟು ಪೋಷಿಸಲು ಕ್ರಮವಹಿಸುವುದು. ನೆರಳಾಗ ನೆರಳು ಹಾಗೂ ಫಲನೀಡುವ ಸ್ಥಳೀಯ ಗಿಡಗಳಾದ ತೆಂಗು, ಮಾವು, ಹಲಸು, ನೇರಳೆ, ಅತ್ತಿ, ನೆಲ್ಲಿ, ಅರಳಿ ಮತ್ತು ಬೇವು ಮುಂತಾದವುಗಳನ್ನು ಬೆಳೆಸುವುದು. ಹಾಗೆಯೇ ಬಿಸಿಯೂಟಕ್ಕೆ ಅಗತ್ಯವಾದ ನಾನಾ ಸೊಪ್ಪುಗಳು ಕರಿಬೇವು, ನುಗ್ಗೆ, ತರಕಾರಿಗಳು, ಬಳ್ಳಿ ತರಕಾರಿಗಳನ್ನು ಬೆಳೆಸಿ ಉಪಯೋಗಿಸುವುದು. ಇದರಿಂದ ವಿದ್ಯಾರ್ಥಿಗಳಲ್ಲಿ ಸಮೂಹಕ ಮತ್ತು ಶ್ರಮ ಗೌರವದ ಮನೋಭಾವನೆ ಬೆಳೆಸಲು ಸಹಕಾರಿಯಾಗಿರುತ್ತದೆ.

ಪ್ರಾಥಮಿಕ ಮತ್ತು ಪ್ರೌಢ ಶಾಲಾ ಆವರಣದಲ್ಲಿ ವಿವಿಧ ರೀತಿಯ ಅಲಂಕಾರಿಕಾ ಗಿಡಗಳು, ಹೂವಿನ ಗಿಡಗಳು ಔಷಧಿ ಸಸ್ಯಗಳನ್ನು ಬೆಳೆಸಿ ಶಾಲೆಯ ಸೊಬಗು ಹೆಚ್ಚಿಸುವುದು ಹಾಗೂ ಶಾಲೆಯ ಪರಿಸರವು ಸ್ವಚ್ಛವಾಗಿ ಸುಂದರವಾಗಿ ಹಾಗೂ ಆರೋಗ್ಯಕರವಾಗಿ ಕಾಣುವಂತೆ ಮತ್ತು ಉಳಿಯುವಂತೆ ವಿದ್ಯಾರ್ಥಿಗಳಲ್ಲಿ ಪರಿಸರ ಕೌಶಲ್ಯ ಹಾಗೂ ಪರಿಸರ ಪ್ರಜ್ಞೆ ಬೆಳೆಸಲು ತಿಳಿಸುತ್ತಾ, ಪ್ರಾರಂಭದಿಂದ ಆಗಸ್ಟ್ 31ರವರೆಗಿನ ಪ್ರಗತಿಯ ವರದಿಯನ್ನು [ಜಾತಿವಾರು ಸಸ್ಯಗಳನ್ನು ನಾಟಿ ಮಾಡಿಸುವುದು] ದಿನಾಂಕ:15.09.2014ರ ಒಳಗಾಗಿ ಹಿರಿಯ ಸಹಾಯಕ ನಿರ್ದೇಶಕರು [ವೃತ್ತಿ ಶಿಕ್ಷಣ], ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರಿಗೆ ಸಲ್ಲಿಸಲು ಸೂಚಿಸಿದೆ.

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ.

**ಇವರಿಗೆ ಮುಂದಿನ ಸೂಕ್ತ ಹಾಗೂ ತುರ್ತು ಕ್ರಮಕ್ಕಾಗಿ:**

01. ರಾಜ್ಯದ ಎಲ್ಲಾ ಉಪನಿರ್ದೇಶಕರು [ಆಡಳಿತ], ಸಾರ್ವಜನಿಕ ಶಿಕ್ಷಣ ಇಲಾಖೆ.
02. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರಿಗೆ.
03. ಹಿರಿಯ ಸಹಾಯಕ ನಿರ್ದೇಶಕರು [ವೃತ್ತಿ ಶಿಕ್ಷಣ], ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
04. ರಾಜ್ಯದ ಎಲ್ಲಾ ತಾಲ್ಲೂಕು / ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.
05. ರಾಜ್ಯದ ಎಲ್ಲಾ ವಿಷಯ ಪರಿವೀಕ್ಷಕರು [ವೃತ್ತಿ ಶಿಕ್ಷಣ], ಉಪನಿರ್ದೇಶಕರ ಕಛೇರಿ [ಆಡಳಿತ], ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಸೂಕ್ತ ಕ್ರಮಕ್ಕಾಗಿ.

**ಪ್ರತಿಯನ್ನು ಗೌರವಗಳೊಂದಿಗೆ ಮುಂದಿನ ಮಾಹಿತಿಗಾಗಿ:**

01. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560001.
02. ಪ್ರಧಾನ ಅರಣ್ಯಸಂರಕ್ಷಣಾಧಿಕಾರಿಗಳು, ಅರಣ್ಯ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು, ತಮ್ಮ ಇಲಾಖೆಯಿಂದ ವಿವಿಧ ರೀತಿಯ ಸಸಿಗಳನ್ನು ಶಾಲೆಗಳಿಗೆ ಉಚಿತವಾಗಿ ನೀಡಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಲು ಕೋರಿದೆ.
03. ಆಯುಕ್ತರು/ನಿರ್ದೇಶಕರು ತೋಟಗಾರಿಕಾ ಇಲಾಖೆ, ಲಾಲ್‌ಬಾಗ್, ಬೆಂಗಳೂರು. ತಮ್ಮ ಇಲಾಖೆಯಿಂದ ವಿವಿಧ ರೀತಿಯ ಸಸಿಗಳನ್ನು ಶಾಲೆಗಳಿಗೆ ಉಚಿತವಾಗಿ ನೀಡಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಲು ಕೋರಿದೆ.
04. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ / ಗುಲ್ಬರ್ಗಾ.
05. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
06. ರಾಜ್ಯದ ಎಲ್ಲಾ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ.
07. ರಾಜ್ಯದ ಎಲ್ಲಾ ಪ್ರಾಚಾರ್ಯರು, ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ.
08. ರಾಜ್ಯದ ಎಲ್ಲಾ ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ.
09. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, [ಯೋಜನೆ], ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560001.
10. ಆಪ್ತ ಕಾರ್ಯದರ್ಶಿಗಳು, ಆಯುಕ್ತರು ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
11. ಕಛೇರಿ ಪ್ರತಿ.

ಕಡತದ ಹೆಸರು. \\Typing1server\E\D\Craft\48-2014.doc